ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ತುಮಕೂರು (ಪ್ರಾದೇಶಿಕ) ವಿಭಾಗ,
ರಾಮಕೃಷ್ಣನಗರ, ಕುಣಿಗಲ್ ರಸ್ತೆ,
ತುಮಕೂರು– 572105.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಕಛೇರಿ : 0816 – 2201196
ಫ್ಯಾಕ್ಸ್ : 0816 - 2201197

ಸಂಖ್ಯೆ–ಎ5/ಲ್ಯಾಂಡ್/ಮೈನಿಂಗ್/ಸಿಆರ್–174/2022–23

ದಿನಾಂಕ:30-7-2022

ಇವರಿಗೆ,

M/s Mineral Enterprises Private Limted,
#2, Berlie Street,
Langford Town,
Bengaluru -560 025.

ಮಾನ್ಯರೇ,

ವಿಷಯ: Diversion of 53.52 ha (Mining 37.45 ha + Approach Road 16.07 ha) forest land for Mining purpose in Sy. No. 11, 12, 130 & 8 of Gollarahalli, Sy. No. 33 & 34 of Thonalapura, Sy. No. 55 of Lakmenhalli, Sy. No. 64 of Hosahalli, Sy. No. 48 & 49 of Kodihalli village, Chikkanayakanhalli Taluk, Tumakuru District in favour of M/s Mineral Enterprises Private Limted Bengaluru -reg.

ಉಲ್ಲೇಖ:.1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 88 ಎಫ್ಎಎಲ್ಎಲ್ 2016, ಬೆಂಗಳೂರು ದಿನಾಂಕ 31-08-2016.

2. Online Proposal No. FP/KA/MIN/154749/2022, dtd 15-6-2022.

3. M/s Mineral Enterprises Private Limted Bengaluru ರವರ ಅರ್ಜಿ ದಿನಾಂಕ: 28-06-2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, M/s Mineral Enterprises Private Limted, Bengaluru ರವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳ ವಿವಿಧ ಸ.ನಂ.ಗಳಲ್ಲಿ ಒಟ್ಟು 53.52 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಮೈನಿಂಗ್ ಉದ್ದೇಶಕ್ಕಾಗಿ ಬಿಡುಗಡೆ ಮಾಡುವಂತೆ ಕೋರಿ Online Proposal No. FP/KA/MIN/154749/2022, dtd 15-6-2022 ನ್ನು Parivesh Portal ನಲ್ಲಿ ಸಲ್ಲಿಸಿರುವುದು ಸರಿಯಷ್ಟೆ. ಪ್ರಸ್ತಾವನೆಯ ವಿವರ ಈ ಕೆಳಗಿನಂತಿದೆ.

**Village wise breakup**

| SL. No | Village | Forest Land (ha.) | Non-Forest Land (ha.) |
|---|---|---|---|
| 1 | Tonalapura Village, Sy.No.33 & 34 | 3.55 | - |
| 2 | Lakmanahalli Village, Sy.No.55 | 0.55 | - |
| 3 | Gollarahalli Village, Sy.No.12,11,130&8 | 40.98 | - |
| 4 | Hosahalli Village, Sy.No.64 | 4.45 | - |
| 5 | Kodihalli Village, Sy.No.48 & 49 | 3.99 | - |
| | **TOTAL** | **53.52** | |

## Component wise breakup

| SL. No | Village | Forest Land (ha.) | Non-Forest Land (ha.) |
|---|---|---|---|
| 1 | Approach Road, Sy.No.12, 11, 130 & 8 of Gollarahal | 3.52632 | - |
| 2 | Approach Road Sy.No.64 of Hosahalli Village | 4.445 | - |
| 3 | Approach Road, Sy.No.48 & 49 of Kodihalli Village | 3.989148 | - |
| 4 | Approach Road, Sy.No.33 & 34 of Tonalapura Village | 3.543 | - |
| 5 | Approach Road, Sy.No.55 of Lakmanahalli Village | 0.55024 | - |
| 6 | Area For Mining | 22.231 | - |
| 7 | Top Soil Storage | 0.5 | - |
| 8 | Over Burden / Rejection Dump | 7.67 | - |
| 9 | Area For Mineral StacK/SGMD | 2.49 | - |
| 10 | Area for Infrastructure | 0.5 | - |
| 11 | Area for Crushing & Screening | 2 | - |
| 12 | Area for Safety Zone/ Green Belt | 2.05 | - |
| | **TOTAL** | **53.494708** | |

ನಿಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆ ಮಾಡಲು ಕೋರಿರುವ 53.52 ಹೆಕ್ಟೇರ್‌ಗೆ ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ತುಮಕೂರು ತಾಲ್ಲೂಕು, ಬೆಳ್ಳಾವಿ ಹೋಬಳಿ, ಚನ್ನೇನಹಳ್ಳಿ ಸ.ನಂ. 170, 171/4, 172, 173/4, 173/9, 174, 175, 176, 177, 178, 180, 182 ಮತ್ತು 183 ರ ಸರ್ಕಾರಿ ಜಮೀನನ್ನು ನೀಡುವುದಾಗಿ ನಕ್ಷೆ ಹಾಗೂ ದಾಖಲೆಗಳನ್ನು ಅಪ್‌ಲೋಡ್ ಮಾಡಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರದ ಉಲ್ಲೇಖ (3)ರ ಆದೇಶದಲ್ಲಿ ಈ ಕೆಳಗಿನಂತೆ ನಿರ್ದೇಶನ ನೀಡಲಾಗಿದೆ.

“ಲಭ್ಯವಿರುವ ಸರ್ಕಾರಿ ಸಿ ಮತ್ತು ಡಿ ಮತ್ತಿತರ ಜಮೀನುಗಳನ್ನು ಖಾಸಗಿ ಸಂಸ್ಥೆಗಳು ಅಥವಾ ವ್ಯಕ್ತಿಗಳಿಗೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡುವುದನ್ನು ಅಥವಾ ಪ್ರಸ್ತಾಪಿಸುವುದನ್ನು ತಕ್ಷಣದಿಂದ ನಿಲ್ಲಿಸಲು ಸೂಚಿಸಿದೆ. ಖಾಸಗಿ ವ್ಯಕ್ತಿಗಳು ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯ ಪ್ರದೇಶದ ಮಧ್ಯದಲ್ಲಿರುವ ಇರತಕ್ಕಂಥ ಅಥವಾ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಹ ಮಾನವ ವನ್ಯಜೀವಿ ಸಂಘರ್ಷವಿರುವ ಖಾಸಗಿ ಜಮೀನುಗಳನ್ನು ಮಾತ್ರ ಗುರುತಿಸಿ, ಖರೀದಿಸಿ ಸರ್ಕಾರಕ್ಕೆ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ನೀಡುವಂತೆ ಆದೇಶಿಸಲಾಗಿದೆ”.

ಆದುದರಿಂದ ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆ ಮಾಡಲು ಕೋರಲಾಗಿರುವ 53.52 ಹೆಕ್ಟೇರ್ ಅರಣ್ಯ ಪ್ರದೇಶಕ್ಕೆ ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಮೇಲೆ ತಿಳಿಸಿರುವಂತೆ ಅರಣ್ಯ ಪ್ರದೇಶದ ಮಧ್ಯದಲ್ಲಿರುವ ಇರತಕ್ಕಂಥ ಅಥವಾ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಹ ಮಾನವ ವನ್ಯಜೀವಿ ಸಂಘರ್ಷವಿರುವ ಖಾಸಗಿ ಜಮೀನುಗಳನ್ನು ಮಾತ್ರ ಗುರುತಿಸಿ, ಖರೀದಿಸಿ ಅರಣ್ಯ ಇಲಾಖೆ ವತಿಯಿಂದ Suitability Certificate ಪಡೆದು ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ನಿಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು.

com- 24752

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅರಣ್ಯ ವಿಮೋಚನೆ ಪರಿಗಣಿಸಲು ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಬದಲಿ ಜಮೀನುಗಳನ್ನು ಗುರುತಿಸುವ ಬಗ್ಗೆ.

*****

ಪ್ರಸ್ತಾವನೆ

ಅರಣ್ಯ ವಿಮೋಚನೆ ಪರಿಗಣಿಸಲು ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಬದಲಿ ಜಮೀನುಗಳನ್ನು ಗುರುತಿಸಿ ಅರಣ್ಯ ಇಲಾಖೆಗೆ ಕೊಡಬೇಕಾಗುತ್ತದೆ. ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಸರ್ಕಾರಿ ಸಿ ಮತ್ತು ಡಿ ಜಮೀನುಗಳನ್ನು ಗುರುತಿಸಿ ಸಲ್ಲಿಸುವ ಪದ್ಧತಿ ಚಾಲ್ತಿಯಲ್ಲಿದ್ದು ಇದರಿಂದ ಸಿ ಮತ್ತು ಡಿ ಜಮೀನುಗಳ ಲಭ್ಯತೆ ಕಡಿಮೆಯಾಗುತ್ತದೆ. ಹೆಚ್ಚಿನ ಸಿ ಮತ್ತು ಡಿ ಜಮೀನುಗಳನ್ನು ಪರಿಭಾವಿತ ಅರಣ್ಯವೆಂದು ಘೋಷಿಸಲಾಗಿದ್ದು, ಲಭ್ಯವಿರುವ ಅಲ್ಪ ಪ್ರಮಾಣದ ಸಿ ಮತ್ತು ಡಿ ಜಮೀನುಗಳು ಸರ್ಕಾರಿ ಉದ್ದೇಶಗಳಿಗೆ ಅರಣ್ಯ ವಿಮೋಚನೆ ಮಾಡುವಾಗ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ನೀಡಲು ಕಾಯ್ದುಕೊಳ್ಳಬೇಕಾಗುತ್ತದೆ.

2. ಖಾಸಗಿ ಸಂಸ್ಥೆಗಳು ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಸರ್ಕಾರಿ ಜಮೀನುಗಳನ್ನು ಪರಿಭಾವಿಸುವುದರಿಂದ, ಸರ್ಕಾರಿ ಉದ್ದೇಶಗಳಿಗೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡಲು ಜಮೀನುಗಳು ಲಭ್ಯವಿಲ್ಲದಂತಾಗುವ ಸಂಭವವಿರುತ್ತದೆ. ಈ ಹಿನ್ನೆಲೆಯಲ್ಲಿರುವ ಲಭ್ಯವಿರುವ ಸಿ ಮತ್ತು ಡಿ ಜಮೀನುಗಳನ್ನು ಸರ್ಕಾರಿ ಉದ್ದೇಶಗಳಿಗೆ ಮಾತ್ರ ಅಂದರೆ ನೀರಾವರಿ, ಕುಡಿಯುವ ನೀರು, ವಿದ್ಯುದೀಕರಣ, ರಸ್ತೆ, ಸರ್ಕಾರಿ ಕಟ್ಟಡಗಳು, ಆಸ್ಪತ್ರೆಗಳು, ಶಾಲೆ, ಕಚೇರಿ ಮುಂತಾದ ಯೋಜನೆಗಳಿಗೆ ಮಂಜೂರು ಮಾಡಲು ಹಾಗೂ ಸಾರ್ವಜನಿಕ ಉದ್ದೇಶಗಳಿಗೆ ಅರಣ್ಯ ಜಮೀನು ವಿಮೋಚನೆಯ ಸಂದರ್ಭದಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡಲು ಕಾಯ್ದಿರಿಸಿಕೊಳ್ಳುವುದು ಸೂಕ್ತವಾಗಿರುತ್ತದೆ.

06 SEP 2016

3. ಖಾಸಗಿ ಸಂಸ್ಥೆಗಳು ಅಥವಾ ವ್ಯಕ್ತಿಗಳು ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಅರಣ್ಯ ಪ್ರದೇಶದೊಳಗೆ ಅಥವಾ ಅರಣ್ಯಕ್ಕೆ ಹೊಂದಿಕೊಂಡಿರತಕ್ಕಂಥ ಖಾಸಗಿ ಜಮೀನುಗಳನ್ನು ಖರೀದಿ ಮಾಡಿ ಸರ್ಕಾರಕ್ಕೆ ಹಸ್ತಾಂತರಿಸಲು ಅವಕಾಶ ಮಾಡಿಕೊಡುವುದು ಸೂಕ್ತ.

4. ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಅಪಜೀ 88 ಎಫ್‌ಎಲ್‌ಎಲ್ 2016, ಬೆಂಗಳೂರು, ದಿನಾಂಕ: 31/08/2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಇನ್ನು ಮುಂದೆ ತಕ್ಷಣದಿಂದ ಜಾರಿಗೆ ಬರುವಂತೆ ಲಭ್ಯವಿರುವ ಸರ್ಕಾರಿ ಸಿ ಮತ್ತು ಡಿ ಜಮೀನುಗಳನ್ನು ಸರ್ಕಾರಿ ಉದ್ದೇಶಗಳಿಗೆ ಮಾತ್ರ ಅಂದರೆ ನೀರಾವರಿ, ಕುಡಿಯುವ ನೀರು, ವಿದ್ಯುದೀಕರಣ, ರಸ್ತೆ, ಸರ್ಕಾರಿ ಕಟ್ಟಡಗಳು, ಆಸ್ಪತ್ರೆಗಳು, ಶಾಲೆ, ಕಚೇರಿ ಮುಂತಾದ ಯೋಜನೆಗಳಿಗೆ ಮಂಜೂರು ಮಾಡಲು ಹಾಗೂ ಸಾರ್ವಜನಿಕ ಉದ್ದೇಶಗಳಿಗೆ ಅರಣ್ಯ ಜಮೀನು ವಿಮೋಚನೆಯ ಸಂದರ್ಭದಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡಲು ಕಾಯ್ದಿರಿಸಿಕೊಳ್ಳಲು ಆದೇಶಿಸಿದೆ.

Scanned with CamScanner

ಲಭ್ಯವಿರುವ ಸರ್ಕಾರಿ ಸಿ ಮತ್ತು ಡಿ ಮತ್ತಿತರ ಜಮೀನುಗಳನ್ನು ಖಾಸಗಿ ಸಂಸ್ಥೆಗಳು ಅಥವಾ ವ್ಯಕ್ತಿಗಳಿಗೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡುವುದನ್ನು ಅಥವಾ ಪ್ರಸ್ತಾಪಿಸುವುದನ್ನು ತಕ್ಷಣದಿಂದ ನಿಲ್ಲಿಸಲು ಸೂಚಿಸಿದೆ. ಖಾಸಗಿ ವ್ಯಕ್ತಿಗಳು ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯ ಪ್ರದೇಶದ ಮಧ್ಯದಲ್ಲಿರುವ ಇರತಕ್ಕಂಥ ಅಥವಾ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಹ ಮಾನವ ವನ್ಯಜೀವಿ ಸಂಘರ್ಷವಿರುವ ಖಾಸಗಿ ಜಮೀನುಗಳನ್ನು ಮಾತ್ರ ಗುರುತಿಸಿ, ಖರೀದಿಸಿ ಸರ್ಕಾರಕ್ಕೆ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ನೀಡುವಂತೆ ಆದೇಶಿಸಲಾಗಿದೆ.

ಈ ಆದೇಶವು ತಕ್ಷಣಕ್ಕೆ ಜಾರಿಗೆ ಬರುವುದು. ಇನ್ನು ಮುಂದೆ ಸರ್ಕಾರಕ್ಕೆ ಸಲ್ಲಿಸುವ ಎಲ್ಲಾ ಖಾಸಗಿ ಸಂಸ್ಥೆಗಳ ಅಥವಾ ವ್ಯಕ್ತಿಗಳ ಪ್ರಕರಣಗಳಿಗೆ ಅನ್ವಯಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಲ್ ಶಾರದ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ: ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು ಇದರ 30 ಪ್ರತಿಗಳನ್ನು ಸರ್ಕಾರದ ಈ ಇಲಾಖೆಗೂ ಮತ್ತು 30 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

ಪ್ರತಿ:

1) ಎಲ್ಲಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ – ಮಾಹಿತಿಗಾಗಿ ಹಾಗೂ ತಮ್ಮ ಅಧೀನದ ಕ್ಷೇತ್ರ ಇಲಾಖೆಗೆ ಸೂಕ್ತ ನಿರ್ದೇಶನಕ್ಕಾಗಿ
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು) ಅರಣ್ಯ ಭವನ, ಮಲ್ಲೇಶ್ವರಂ ಬೆಂಗಳೂರು
3) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸೆಂಟ್ರಲ್) ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಇಲಾಖೆ, ಕೇಂದ್ರಿಯ ಸದನ, ಎಫ್‌ಸಿ ವಿಂಗ್, ಕೋರಮಂಗಲ, ಬೆಂಗಳೂರು
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಭೂ ದಾಖಲೆ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
5) ಮಾನ್ಯ ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿಗಳು
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು
7) ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು
8) ರಾಜ್ಯದ ಎಲ್ಲಾ ಮುಖ್ಯ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು – ಪ್ರಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಮೂಲಕ
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು



Scanned with CamScanner